UASB LIBRARY
Newspaper Clippings
Pg .1 Friday 23-07-2021 Jai Kisan



ಕೃಷಿ ವಿವಿಗಳಲ್ಲಿ ತಂತ್ರಜ್ಞಾನ ಆವಿಷ್ಕಾರ ಕೇಂದ್ರ

3 ವರ್ಷ ಅವಧಿಗೆ ಸ್ಥಾಪನೆ | ಖಾಸಗಿ ಕಂಪನಿ ಸಹಭಾಗಿತ್ವ | ಸಚಿವ ಸಂಪುಟ ಸಭೆ ಒಪ್ಪಿಗೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಕೃಷಿ ವಿಜ್ಞಾನ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ನಲ್ಲಿ ಅತ್ಯಾಧುನಿಕ ಕೃಷಿ ತಂತ್ರಜ್ಞಾನದ ಆವಿಷ್ಕಾರ ಹಾಗೂ ಅಭಿವೃದ್ಧಿ ಕೇಂದ್ರಗಳನ್ನು ತೆರೆಯಲು ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕೃಷಿ ಕ್ಷೇತ್ರದಲ್ಲಿ ಹೊಸ ಸಾಫ್ಟ್‌ವೇರ್ ಆಳವಡಿಕೆ ಮಾಡಿ ರೈತರಿಗೆ ಸಂಶೋಧನಾ ಫಲಗಳನ್ನು ದೊರಕಿಸಿಕೊಡುವ ನಿಟ್ಟಿನಲ್ಲಿ 770 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 3 ವರ್ಷಗಳ ಅವಧಿಗೆ ಈ ಕೇಂದ್ರ ಸ್ಥಾಪಿಸಲು ಅನುಮೋದನೆ ನೀಡಲಾಗಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ. ಸಭೆಯ ಬಳಿಕ ಈ ಕುರಿತು ಮಾಹಿತಿ ನೀಡಿದ ಗೃಹ ಸಚಿವ ಬಸವರಾಜ ಬೊಮ್ಮಾಯಿ, ಮೆ.ಹೆಕ್ಸಾಗನ್ ಮ್ಯಾನ್ಯುಫ್ಯಾಕ್ಚರಿಂಗ್ ಇಂಟೆಲಿಜನ್ಸ್ ಇಂಡಿಯಾ ಕಂಪನಿ ಈ ಕೇಂದ್ರ ತೆರೆಯಲು ಮುಂದಾಗಿದೆ. ಒಂದು ಕೇಂದ್ರಕ್ಕೆ 110 ಕೋಟಿ ರೂ. ವೆಚ್ಚ ತಗುಲಲಿದ್ದು, ಆ ಪೈಕಿ 85 ಕೋಟಿ ರೂ.ಗಳನ್ನು ಕಂಪನಿ ವ್ಯಯಿಸುತ್ತದೆ. ಉಳಿದ ಹಣವನ್ನು ರಾಜ್ಯ ಸರ್ಕಾರ ಭರಿಸಲಿದೆ. ಹೊಸ ತಂತ್ರಜ್ಞಾನ ಅಭಿವೃದ್ಧಿ ನಿಟ್ಟಿನಲ್ಲಿ ಈ ಯೋಜನೆ ಹೆಚ್ಚು ಪ್ರಯೋಜನಕಾರಿಯಾಗಲಿದೆ. ಆಗ್ರಿ ಲ್ಯಾಬ್, ಇನ್ಕ್ಯೂಬೇಷನ್ ಸೆಂಟರ್ ಮಾಡಲಾಗುತ್ತದೆ ಎಂದರು.



ಶೇ.10 ಮೀಸಲು ನಿಗದಿ: ಕೇಂದ್ರ ಸರ್ಕಾರ ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆಯಲ್ಲಿ ಆರ್ಥಿಕ ದುರ್ಬಲ ವರ್ಗದವರಿಗೆ ಶೇ.10 ಮೀಸಲು ನಿಗದಿ ಮಾಡಿದೆ. ಆದರಲ್ಲಿ ಯಾವ ಯಾವ ಸಮುದಾಯಗಳನ್ನು ಸೇರಿಸಬೇಕು ಎಂಬುದರ ಬಗ್ಗೆ ಚರ್ಚಿಸಲಾಗಿದೆ. ಎಸ್‌ಸಿ, ಎಸ್‌ಟಿ, ಒಬಿಸಿ ಈ ಯಾವುದರಲ್ಲೂ ಸೇರ್ಪಡೆಯಾಗದೇ ಇರುವ ಮತ್ತು ಕುಟುಂಬದ ವಾರ್ಷಿಕ ಆದಾಯ 8 ಲಕ್ಷಕ್ಕಿಂತ ಕಡಿಮೆ ಇರುವ ಮತ್ತು ಮೀಸಲಾತಿಯಿಂದ ಹೊರಗುಳಿದ ಸಮುದಾಯಗಳನ್ನು ಈ ಪಟ್ಟಿಗೆ ಸೇರ್ಪಡೆ ಮಾಡುವ ಕುರಿತು ಸಂಪುಟ ಸಭೆ ತೀರ್ಮಾನಿಸಿದೆ. ಕೇಂದ್ರ ನಾಗರಿಕ ಸೇವಾ ನೇಮಕ ಮತ್ತು ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಇದು ಅನ್ವಯವಾಗಲಿದೆ.

ಶಿವಮೊಗ್ಗಕ್ಕೆ ಸಿಕ್ಕಿದ್ದೇನು?

ಶಿವಮೊಗ್ಗದಲ್ಲಿ ಕರ್ನಾಟಕ ಆಯುಷ್ ವಿಶ್ವವಿದ್ಯಾಲಯ ಸ್ಥಾಪಿಸುವ ವಿಧೇಯಕಕ್ಕೆ ಸಂಪುಟ ಒಪ್ಪಿಗೆ ನೀಡಿತು. ಗೋ ರಕ್ಷಾ ನ್ಯಾಸ್ ಸಮಿತಿಗೆ 9.32 ಎಕರೆ ಬಿ.ಕರಾಬು ಜಮೀನು ನೀಡಲು ಸಮ್ಮತಿಸಿತು. ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆ ಆವರಣದಲ್ಲಿ ಫೆರಿಪಿರಲ್ ಕ್ಯಾನ್ಸರ್ ಕೇಂದ್ರ ಸ್ಥಾಪನೆಗೆ 50 ಕೋಟಿ ರೂ.ಗೆ ಅನುಮೋದನೆ ದೊರೆಯಿತು.



ವಲಸಿಗ ಸಚಿವರ ದಿಗಿಲು

ಬಿಎಸ್‌ವೈ ರಾಜಕೀಯ ವಿಷಯ ಪ್ರಸ್ತಾಪಿಸದ ಕಾರಣ ವಲಸಿಗ ಸಚಿವರು ಮತ್ತಷ್ಟು ದಿಗಿಲುಗೊಂಡು ನೇರ ಭೇಟಿಗೆ ತವಕಿಸಿದರು. ಸಭೆ ಮುಗಿಯುತ್ತಲೇ ಬಿಎಸ್‌ವೈ ಅವರನ್ನು ಹಿಂಬಾಲಿಸಿ ಸಿಎಂ ಕೊಠಡಿಯಲ್ಲಿ ಬಹು ಹೊತ್ತು ಚರ್ಚಿಸಿದರು. ಸಚಿವರಾದ ಡಾ.ಕೆ. ಸುಧಾಕರ್, ಎಸ್.ಟಿ.ಸೋಮಶೇಖರ್, ಬಿ.ಸಿ.ಪಾಟೀಲ್, ಶಿವರಾಂ ಹೆಬ್ಬಾರ್, ಎಂ.ಟಿ.ಬಿ.ನಾಗರಾಜ್ ಮತ್ತು ಕೆ.ಗೋಪಾಲಯ್ಯ ಅವರಿಗೆ ಆತಂಕ ಬೇಡವೆಂಬ ಸಲಹೆ ನೀಡಿದ ಸಿಎಂ ಬಿಎಸ್‌ವೈ, ನಿರ್ದಿಷ್ಟವಾಗಿ ಯಾವುದೇ ಭರವಸೆ ನೀಡಲಿಲ್ಲ ಎಂದು ಮೂಲಗಳು ತಿಳಿಸಿವೆ.

ಮೌನಕ್ಕೆ ಶರಣಾಗಿದ್ದ ಬಿಎಸ್‌ವೈ

ರಾಜಕೀಯ ಕಾರಣಗಳಿಗಾಗಿ ಮಹತ್ವದ ಪಡೆದುಕೊಂಡಿದ್ದ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಚಕಾರವೆತ್ತದೆ, ಹಲವರ ನಿರೀಕ್ಷೆ ಹುಸಿಗೊಳಿಸಿದರು. ದೆಹಲಿಯಿಂದ ಮರಳಿದ ಬಳಿಕ ಬಹುತೇಕ ಸಚಿವರೊಂದಿಗೆ ಬಿಎಸ್‌ವೈ ಮುಖಾಮುಖಿ ಚರ್ಚೆ ನಡೆಸಿದ್ದಿಲ್ಲ, ಜತೆಗೆ ಓಡಾಡಿದ ಸಚಿವರೊಂದಿಗೆ ಮಾತುಕತೆ ಔಪಚಾರಿಕತೆಗೆ ಸೀಮಿತವಾಗಿತ್ತು. ವರಿಷ್ಠರ ಸಂದೇಶಕ್ಕೆ ಕಾದಿರುವೆ, ಅವರ ಸೂಚನೆ ಪಾಲಿಸುವೆ ಎಂದು ಸಿಎಂ ಬಿಎಸ್‌ವೈ ಸ್ವಯಂ ಪ್ರೇರಿತ ಹೇಳಿಕೆ ನೀಡಿದ್ದರಿಂದ ಸಚಿವ ಸಹೋದ್ಯೋಗಿಗಳು ಕಾತರದಿಂದ ಕಾದಿದ್ದರು. ಆದರೆ ಸಚಿವ ಸಂಪುಟ ಸಭೆಯ ಕಾರ್ಯಸೂಚಿಯಂತೆ ಚರ್ಚೆ, ಒಪ್ಪಿಗೆಗಳಾದವು. ನಂತರವೂ ಬಿಎಸ್‌ವೈ ಬೇರೆ ವಿಚಾರಗಳನ್ನು ಪ್ರಸ್ತಾಪಿಸಲಿಲ್ಲ.

ಇತರ ಪ್ರಮುಖ ನಿರ್ಣಯಗಳು

- ರಾಜ್ಯ ಸರ್ಕಾರಿ ನೌಕರರಿಗೆ ಹಾಗೂ ಅವರ ಅಲವಂಬಿತ ಕುಟುಂಬ ಸದಸ್ಯರಿಗೆ ನಗದು ರಹಿತ ವೈದ್ಯಕೀಯ ಸೌಲಭ್ಯ ಒದಗಿಸಲು ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆಗೆ ಅನುಮೋದನೆ. ಯೋಜನೆಗೆ ವಾರ್ಷಿಕ 250 ಕೋಟಿ ರೂ. ವೆಚ್ಚಕ್ಕೆ ಮಂಜೂರಾತಿ.
- 35-45 ಲಕ್ಷ ರೂ. ಮೊತ್ತದ ಫ್ಲಾಟ್/ಅಪಾರ್ಟ್‌ಮೆಂಟ್ ನೋಂದಣಿಗೆ ಮುದ್ರಾಂಕ ಶುಲ್ಕ ಶೇ. 5 ರಿಂದ ಶೇ.3 ಇಳಿಕೆ ಮಾಡಲಾಗಿದೆ. ಈ ಫ್ಲಾಟ್ ಮತ್ತು ಅಪಾರ್ಟ್‌ಮೆಂಟ್ ಮಾರ್ಗಸೂಚಿ ದರ ಮರು ಪರಿಶೀಲನೆಗೆ ಒಳಪಡಿಸಲು ತೀರ್ಮಾನ.
- ಬೆಂಗಳೂರು ಜಲಮಂಡಳಿಯ ಕೋರಮಂಗಲ ಹಾಗೂ ಚಲ್ಲಘಟ್ಟ ಕಣಿವೆಯಲ್ಲಿರುವ ಪ್ರಸ್ತುತ 248 ದಶಲಕ್ಷ ಲೀ. ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ನಿಗದಿಪಡಿಸಿರುವ ಮಾನದಂಡಗಳಿಗೆ ಸರಿಹೊಂದುವಂತೆ ಉನ್ನತೀಕರಿಸುವ ಕಾಮಗಾರಿಗೆ 718 ಕೋಟಿ ರೂ.ಗಳ ವಿಸ್ತೃತ ಯೋಜನಾ ವರದಿಗೆ ಆಡಳಿತಾತ್ಮಕ ಒಪ್ಪಿಗೆ.
- ಕೆ.ಸಿ. ವ್ಯಾಲಿ ಯೋಜನೆ 248 ಎಂಎಲ್ ಡಿ ನೀರು ಶುದ್ಧೀಕರಣಕ್ಕೆ ಉನ್ನತೀಕರಣಕ್ಕೆ 718 ಕೋಟಿ ರೂ. ಡಿಪಿಆರ್‌ಗೆ ಅನುಮತಿ.
- ಕೊಪ್ಪಳ ಜಿಲ್ಲೆ ಹಿರೇಹಳ್ಳ ಯೋಜನೆ 507 ಕೋಟಿ ರೂ.ಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಆಡಳೀತಾತ್ಮಕ ಅನುಮೋದನೆ.
- ಬೆಳಗಾವಿ ಜಿಲ್ಲೆ ರಾಮದುರ್ಗ ತಾಲೂಕಿನ ಹಂಪಿಹೊಳಿ ಗ್ರಾಮದಲ್ಲಿ ಮಲಪ್ರಭಾ ನದಿಗೆ ತಡೆಗೋಡೆ ನಿರ್ಮಾಣ ಕಾಮಗಾರಿ 126 ಕೋಟಿ ರೂ. ಗಳ ಪ್ರಸ್ತಾವನೆಗೆ ಆತಳಿತಾತ್ಮಕ ಅನುಮೋದನೆ ನೀಡಲಾಗಿದೆ.
- ಆರೋಗ್ಯ ಇಲಾಖೆಯಿಂದ ಮಹಾದೇವಪುರ ವಿಧಾನ ಸಭಾ ಕ್ಷೇತ್ರದಲ್ಲಿ 250 ಹಾಸಿಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ ಅನುಮೋದನೆ ನೀಡಿದ್ದೇವೆ. 180 ಕೋಟಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಮೊದಲ ಹಂತದಲ್ಲಿ ಕಟ್ಟಡ ನಿರ್ಮಾಣಕ್ಕೆ 137 ಕೋಟಿ ರೂ. ಬಿಡುಗಡೆಗೆ ಒಪ್ಪಿಗೆ.
- ಹೊನ್ನಾಳಿ ತಾಲೂಕು ನ್ಯಾಮತಿ ಪಟ್ಟಣದಲ್ಲಿ ಪಿ.ವಿ. ಆಂಜನೇಯ ದೇವಸ್ಥಾನ ಬೀದಿ 1.7 ಕಿ.ಮೀ. ರಸ್ತೆ ಅಭಿವೃದ್ಧಿ, ನ್ಯಾಮತಿ ಪಟ್ಟಣದಲ್ಲಿ ಅಲಂಕಾರಿಕ ದೀಪ ಅಳವಡಿಸಿ, ಹೊನ್ನಾಳಿ ತಾಲೂಕಿನ ರಾ. ಹೆ. 48 ರಲ್ಲಿ ರಸ್ತೆ ವಿಭಜಕ ನಿರ್ಮಾಣ ಮತ್ತಿತರ ಕಾಮಗಾರಿಗಳಿಗೆ 25 ಕೋಟಿ ರೂ. ಗಳಿಗೆ ಅನುಮೋದನೆ.

ಕೃಷಿ ತಂತ್ರಜ್ಞಾನ ಆವಿಷ್ಕಾರ ಕೇಂದ್ರ ಸ್ಥಾಪನೆ

ಹೆಕ್ಸಾಗನ್ ಮ್ಯಾನುಫ್ಯಾಕ್ಚರಿಂಗ್ ಇಂಟೆಲಿಜನ್ಸ್ ಇಂಡಿಯಾ ಕಂಪನಿಯ ಸಹಯೋಗದಲ್ಲಿ ರಾಜ್ಯದ ಏಳು ಕಡೆ ಅತ್ಯಾಧುನಿಕ ಕೃಷಿ ತಂತ್ರಜ್ಞಾನದ ಆವಿಷ್ಕಾರ ಹಾಗೂ ಅಭಿವೃದ್ಧಿ ಕೇಂದ್ರ ಸ್ಥಾಪಿಸುವ 770 ಕೋಟಿ ರೂ. ವೆಚ್ಚದ ಯೋಜನೆಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಯೋಜನಾ ವೆಚ್ಚದಲ್ಲಿ 595 ಕೋಟಿ ರೂ.ಗಳನ್ನು ಹೆಕ್ಸಾಗನ್ ಕಂಪನಿ ಭರಿಸಿದರೆ, ಉಳಿದವುಗಳನ್ನು ರಾಜ್ಯ ಸರಕಾರ ವೆಚ್ಚ ಮಾಡಲಿದ್ದು, ಮೂರು ವರ್ಷಗಳಲ್ಲಿ ಕೇಂದ್ರ ಸ್ಥಾಪಿಸಲು ಅನುಮತಿ ನೀಡಲಾಗಿದೆ. ಕಂಪನಿಯು ರಾಜ್ಯದ ಕೃಷಿ ವಿಜ್ಞಾನಗಳ ವಿವಿಗಳ ಕ್ಯಾಂಪಸ್‌ನಲ್ಲಿ ಅತ್ಯಾಧುನಿಕ ಕೃಷಿ ತಂತ್ರಜ್ಞಾನದ ಆವಿಷ್ಕಾರ ಹಾಗೂ ಅಭಿವೃದ್ಧಿ ಕೇಂದ್ರ ತೆರೆಯಲು ಮುಂದಾಗಿದೆ. ಒಂದು ಕೇಂದ್ರ ಸ್ಥಾಪನೆಗೆ 110 ಕೊಟಿ ರೂ. ವೆಚ್ಚವಾಗಲಿದ್ದು, 85 ಕೊಟಿ ರೂ.ಗಳನ್ನು ಕಂಪನಿ ಭರಿಸಲಿದೆ. ಉಳಿದ 25 ಕೋಟಿ ರೂ.ಗಳನ್ನಷ್ಟೇ ರಾಜ್ಯ ಸರಕಾರ ವೆಚ್ಚ ಮಾಡಲಿದೆ. ಡ್ರೋನ್ ಲ್ಯಾಬ್, ಕೃಷಿ ಲ್ಯಾಬ್, ಆಗ್ರೋಮನಿ ಲ್ಯಾಬ್, ಕೃಷಿ ಸಲಕರಣೆ ವಿನ್ಯಾಸ ಹಾಗೂ ಉತ್ಪಾದನಾ ಇನ್‌ಕ್ಯುಬೇಷನ್ ಸೆಂಟರ್ ಗಳು ನಿರ್ಮಾಣವಾಗಲಿದ್ದು, ಸಂಸ್ಥೆಯೊಂದಿಗೆ ಒಡಂಬಡಿಕೆಗೆ ತೀರ್ಮಾನಿಸಲಾಗಿದೆ.

23-07-2021
Vv Pg 11

For more information visit
University Library Website
Web - uasbagrilibindia.org
E-mail- librarian@uasbangalore.edu.in

23-07-2021
Vk Pg 02

UASB LIBRARY

Newspaper Clippings

Pg .2 Jai Kisan Friday 23-07-2021

App helps farmers update land records

Sandeep.Moudgal
@timesgroup.com

Bengaluru: The mobile app where farmers can log details of their crops is also helping them update land records, taking away the hassle of running from one department to another. Updating RTCs (record of rights, tenancy and crops) is a key requirement for farmers to claim insurance, state relief after natural disasters and MSP, and the app has made this process easier.

The state government launched the crop survey facility, or Karnataka Raitha bele sameekshe app, last year to get a better idea of the status of more than 2.1 crore agricultural plots and extend assistance or benefits accordingly.

AFP



HARVEST TIME: A maize farmer on the outskirts of Bengaluru

Farmers upload pictures of their fields and describe what they are growing.

"What was earlier an application in the hands of officials, forcing people to run from pillar to post to get their records updated, has now become like a mobile feature for farmers, who can update their records with a few taps," said agriculture minister BC Patil.

Patil added that self-survey of crops was enabling farmers to seek their rightful compensation and support price without depending on anyone.

Officials said that this had resulted in accountability and transparency. Last year, when the government announced Covid aid of Rs 5,000 each for maize growers, the agriculture department used the information uploaded on the app to identify the beneficiaries. Chief minister BS Yediyurappa had set aside Rs 500 crore for 10 lakh maize growers.

"With the help of this technology, we were able to save the state government Rs 128 crore as the records of claimants were cross-verified with the self-uploaded pictures and crop details," said agriculture commissioner Brijesh Kumar Dixit. The Prime Minister's Office called the app a potential model for other states and issued a certificate of appreciation to Karnataka.

Encouraged by the results, the state government plans to use the data sets to boost sales of farm products and help farmers get better prices. This may involve establishing a direct buyer-seller connection.

But the app still needs some work: there are photograph mismatches of 10 per cent and concerns about fake entries. Farmers' representatives say many growers don't know about the app or can't access it. "The majority of small and marginal farmers don't have smartphones or internet access. This is a major challenge," said farm leader Kurubur Shanthakumar.

23-07-2021
Time of Ind Pg 04

ಬಾಂಗ್ಲಾದ ಪ್ರಗತಿಪರ ರೈತನಿಂದ ಭತ್ತದ ಹೊಸ ತಳಿ

ಮಳೆಗೂ ಜಗ್ಗದ ಚಾರುಲತಾ

ಢಾಕಾ: ಬಾಂಗ್ಲಾದೇಶದ ಚಾಂದಿಪುರ ಜಿಲ್ಲೆಯ ಕರಾವಳಿ ಸಮೀಪವಿರುವ ಹಳ್ಳಿಯ ಪ್ರಗತಿಪರ ರೈತ ದಿಲೀಪ್ ಚಂದ್ರ ತರಫ್ದಾರ್ ಹೊಸ ಭತ್ತದ ತಳಿ ಸಂಶೋಧಿಸಿದ್ದಾರೆ. ಅದು ಚಂಡಮಾರುತ ಮಳೆಗೆ ಜಗ್ಗುವುದಿಲ್ಲ, ಉಪ್ಪು ನೀರಿನಲ್ಲೂ ಉತ್ತಮ ಇಳುವರಿ ಕೊಡುವ ಸಾಮರ್ಥ್ಯ ಹೊಂದಿದೆ. ಈ ತಳಿಯ ಬಿತ್ತನೆಯಿಂದ ಬಿರುಗಾಳಿಗೆ ಎದೆಯೊಡ್ಡಿ ನಿಲ್ಲಬಲ್ಲ ಶಕ್ತಿಶಾಲಿ ಪೈರು ಹುಟ್ಟಲಿವೆ. ಅಲ್ಲದೆ, ಯಾವುದೇ ಕೀಟನಾಶಕ, ರಸಗೊಬ್ಬರಗಳ ಬಳಕೆಯಿಲ್ಲದೆಯೂ ಸಮೃದ್ಧಿ ಫಸಲು ಪಡೆಯಬಹುದಾಗಿದೆ. ಇದಕ್ಕೆ ಚಾರುಲತಾ ಎಂಬ ಹೆಸರಿಡಲಾಗಿದೆ.

ಭತ್ತದ ಪೈರಿಗೆ ರಭಸವಾದ ಮಳೆ ಅಥವಾ ಚಂಡಮಾರುತ ಮೊದಲನೇ ಶತ್ರುವಾದರೆ, ಚಂಡಮಾರುತದ ಉಪ್ಪು ನೀರು ಎರಡನೇ ಶತ್ರು. ಇವೆರಡನ್ನೂ ತಡೆದುಕೊಂಡು ಭತ್ತ ಕಾಳುಗಟ್ಟುವ ಸಂದರ್ಭದಲ್ಲಿ ಭರ್ರನೆ ಬಿರುಗಾಳಿ ಬೀಸಿತೆಂದರೆ ಕಾಳುಗಟ್ಟಲಿರುವ ಭತ್ತವೆಲ್ಲಾ



ಮಣ್ಣುಪಾಲಾಗುತ್ತದೆ. ಹತ್ತು ವರ್ಷಗಳ ಹಿಂದೆ, ಈ ಸಮಸ್ಯೆಯನ್ನು ನಿವಾರಿಸುವ ಮಾರ್ಗಗಳ ಬಗ್ಗೆ ಆಲೋಚಿಸಿದಾಗ ದಿಲೀಪ್ ಅವರಿಗೆ ಹೊಳೆದಿದ್ದು ಪೂರ್ವಜರು ಬಳಸುತ್ತಿದ್ದ ಭತ್ತದ ತಳಿಗಳ ಬಗ್ಗೆ. ಹಲವಾರು ಪ್ರಯೋಗಗಳ ಮೂಲಕ ಮೂಲ ತಳಿಯನ್ನು ಕಂಡುಕೊಳ್ಳುವಲ್ಲಿ ಸಫಲರಾದ ಅವರು ಚಾರುಲತಾ ತಳಿಯನ್ನು ಅಭಿವೃದ್ಧಿಪಡಿಸಿದ್ದಾರೆ.

23-07-2021
Uv Pg 08